# ಕರ್ನಾಟಕ ವಿಧಾನ ಪರಿಷತ್ತು

1. ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಎಸ್. ರವಿ.
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 929
3. ಉತ್ತರಿಸುವ ದಿನಾಂಕ : 17.12.2024
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ನೋಂದಾಯಿಸಿಕೊಂಡಿರುವ ನೊಳಂಬ ವೀರಶೈವ ಸಂಘ ರಿ. ಅಥವಾ ನೊಳಂಬ ಲಿಂಗಾಯಿತ ಸಂಘ (ರಿ) ಅಸ್ತಿತ್ವದಲ್ಲಿದೆಯೇ; ಹಾಗಿದ್ದಲ್ಲಿ, ಈ ಸಂಘವನ್ನು ಯಾವಾಗ ನೋಂದಾಯಿಸಲಾಯಿತು; ಸಂಘದ ನೋಂದಣಿ ಪ್ರಮಾಣ ಪತ್ರ ಹಾಗೂ ಹಾಲಿ ಚಾಲ್ತಿಯಲ್ಲಿರುವ ಬೈಲಾ ಪ್ರತಿಯನ್ನು ನೀಡುವುದು. | ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ನೊಳಂಬ ವೀರಶೈವ ಸಂಘ (ರಿ) ಅಥವಾ ನೊಳಂಬ ಲಿಂಗಾಯಿತ ಸಂಘ (ರಿ) ಎಂಬ ಹೆಸರಿನ ಸಂಘವು ನೋಂದಣಿಯಾಗಿರುವುದಿಲ್ಲ. |
| (ಆ) | ಸದರಿ ಸಂಘದ ಬೈಲಾವನ್ನು ನೋಂದಣಿಯಾದ ದಿನದಿಂದ ಇಲ್ಲಿಯವರೆಗೆ ಎಷ್ಟು ಬಾರಿ ತಿದ್ದುಪಡಿ ಮಾಡಲಾಗಿದೆ; ತಿದ್ದುಪಡಿ ಮಾಡಲಾಗಿರುವ ಬೈಲಾದ ಎಲ್ಲಾ ಪ್ರತಿಗಳನ್ನು ನೀಡುವುದು; ನೋಂದಣಿಯಾದ ದಿನಾಂಕದಿಂದ ಇಲ್ಲಿಯವರೆಗೆ ಅಸ್ತಿತ್ವದಲ್ಲಿದ್ದರೆ, ಸಂಘಕ್ಕೆ ಸಂಬಂಧಿಸಿದ ಹಾಲಿ ಇರುವ ಎಲ್ಲಾ ರೀತಿಯ ದಾಖಲೆಗಳನ್ನು ದೃಢೀಕರಿಸಿ ನೀಡುವುದು; | ಉಪ ಪ್ರಶ್ನೆ (ಅ) ರಲ್ಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ. |
| (ಇ) | ಸಂಘದಲ್ಲಿರುವ ಬೈಲಾದ ಪ್ರಕಾರ ಕಾರ್ಯಕಾರಿ ಮಂಡಳಿ ಅಸ್ತಿತ್ವದಲ್ಲಿದೆಯೇ; ಸದರಿ ಕಾರ್ಯಕಾರಿ ಮಂಡಳಿಗೆ ಚುನಾವಣೆ ನಡೆಸಲಾಗಿದೆಯೇ; ನಡೆಸಿದ್ದಲ್ಲಿ, ಚುನಾವಣೆ ಕುರಿತು ಮಾಹಿತಿ ನೀಡುವುದು; ಚುನಾವಣೆ ನಡೆಸಲಾಗದೇ ಇದ್ದಲ್ಲಿ ನಡೆಸುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು) | ಉಪ ಪ್ರಶ್ನೆ (ಅ) ರಲ್ಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ. |

| | | |
|---|---|---|
| (ಈ) | ಸದರಿ ಸಂಘದ ಸದಸ್ಯತ್ವ ಕುರಿತಂತೆ ಇರುವ ನಿಯಮಗಳೇನು? ನಿಯಮಗಳನ್ನು ಮೀರಿ ಸಂಘದ ಸದಸ್ಯತ್ವ ನೀಡಿದ್ದಲ್ಲಿ, ಅವುಗಳನ್ನು ರದ್ದುಪಡಿಸುವ ಕುರಿತು ಸರ್ಕಾರದ ನಿಲುವೇನು; (ಮಾಹಿತಿ ನೀಡುವುದು). | ಉಪ ಪ್ರಶ್ನೆ (ಅ) ರಲ್ಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ. |
| (ಉ) | ಸಂಘಗಳ ನಿಯಮಾನುಸಾರ ವಾರ್ಷಿಕ ಮಹಾಸಭೆಗಳನ್ನು ಕರೆಯುವ ಅಂತಿಮ ದಿನಾಂಕ ಯಾವುದು; ಹಾಗಿದ್ದಲ್ಲಿ, ಸದರಿ ಸಂಘವು ಪ್ರಸಕ್ತ ಸಾಲಿನ ವಾರ್ಷಿಕ ಮಹಾಸಭೆ ನಡೆದಿರುವ ದಿನಾಂಕ ಮತ್ತು ಸಭಾ ನಡವಳಿಗಳನ್ನು ನೀಡುವುದು;. ನಡೆಯದೆ ಇದ್ದಲ್ಲಿ ಕಾರಣಗಳೇನು? (ಮಾಹಿತಿ ನೀಡುವುದು) | ಉಪ ಪ್ರಶ್ನೆ (ಅ) ರಲ್ಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ. |

**ಸಿಒ 290 ಸಿಎಸ್‌ಆರ್ 2024**

K.N. Rajanna

**(ಕೆ.ಎನ್. ರಾಜಣ್ಣ)**
**ಸಹಕಾರ ಸಚಿವರು**